ಅ) ಪ್ರತಿ ವರ್ಷ ಕೃಷಿ ಹುಟ್ಟುವಳಿ ಉತ್ಪಾದನಾ ವೆಚ್ಚ, ಹಣದುಬ್ಬರ ಪ್ರಮಾಣ ಹಾಗೂ ಲಾಭಾಂಶದ ಪ್ರಮಾಣ ಪರಿಗಣಿಸಿಕೊಂಡು ಕನಿಷ್ಟ ಬೆಂಬಲ ಬೆಲೆ ನಿರ್ಣಯಿಸಲಾಗುವುದು.

ತೊಗರಿ ಮಂಡಳಿ ರಚನೆ

723(889) ಶ್ರೀ ಕೈಲಾಸನಾಥ ಪಾಟೀಲ್ (ಚಿಂಚೋಳಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತೋಗರಿ ಮಂಡಳಿಯನ್ನು ರಚಿಸುವ ಘೋಷಣೆಯಾಗಿದ್ದು, ಈ ನಿಟ್ಟಿನಲ್ಲಿ ಇಲ್ಲಿಯವರೆಗೆ ಏನು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ಆ) ಇದಕ್ಕೆ ಎಷ್ಟು ಹಣವನ್ನು ಒದಗಿಸಲಾಗುವುದು?

ಇ) ರೈತರಿಗೆ ಮಂಡಳಿಯಿಂದ ದೊರೆಯುವ ಸೌಲಭ್ಯಗಳೇನು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು) :

ಅ) ತೋಗರಿ ಮಂಡಳಿಯನ್ನು ರಚಿಸಿ ಆದೇಶ ಹೊರಡಿಸಿದ ನಂತರ ಕೈಗೊಂಡ ಕ್ರಮಗಳನ್ನು ಕೆಳಗೆ ನೀಡಲಾಗಿದೆ.

1. ಕಂಪನಿ ಕಾಯಿದೆ 1956ರಡಿ ಈ ಮಂಡಳಿಯನ್ನು ದಿನಾಂಕ: 13-5-2002ರಂದು ನೊಂದಾಯಿಸಲಾಗಿದೆ.

2. ಮಂಡಳಿಗೆ 9 ಅಧಿಕಾರಿ ನಿರ್ದೇಶಕರನ್ನು ನೇಮಿಸಿ ದಿನಾಂಕ: 25-6-2002 ರಂದು ಆದೇಶ ಹೊರಡಿಸಿದೆ.

3. ಕೃಷಿ ಇಲಾಖೆಯ ಅಪರ ಕೃಷಿ ನಿರ್ದೇಶಕರೊಬ್ಬರನ್ನು ಮಂಡಳಿಯ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಿಸಿ ದಿನಾಂಕ: 9-7-2002ರಂದು ಆದೇಶ ಹೊರಡಿಸಿದೆ.

4. ಷೇರು ಧನದ ರೂಪದಲ್ಲಿ ಮಂಡಳಿಗೆ 5.00 ಕೋಟಿಗಳನ್ನು ಬಿಡುಗಡೆ ಮಾಡಿ ದಿನಾಂಕ: 9-7-2002ರಂದು ಆದೇಶ ಹೊರಡಿಸಿದೆ.

ಆ) ಷೇರು ಧನದ ರೂಪದಲ್ಲಿ 5.00 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿ ಆದೇಶ ಹೊರಡಿಸಲಾಗಿದೆ.

ಇ) ತೊಗರಿ ಮಂಡಳಿಯಿಂದ ರೈತರಿಗೆ ದೊರೆಯುವ ಸೌಲಭ್ಯಗಳನ್ನು

1. ರೈತರಿಗೆ ಅವಶ್ಯಕತೆಯಿರುವ ಪರಿಕರಗಳ ಸರಬರಾಜು

2. ತೊಗರಿ ಉತ್ಪಾದನೆಯಲ್ಲಿ ರೈತರಿಗೆ ಆಧುನಿಕ ಉತ್ಪಾದನಾ ತಂತ್ರಜ್ಞಾನ ನೀಡಿ ಉತ್ಪಾದನೆ ಹೆಚ್ಚಿಸುವುದು, ಹಾಗೂ ಆಧುನಿಕ ಸಂಸ್ಕರಣಾ ಪದ್ಧತಿಗಳನ್ನು ಅಳವಡಿಸಲು ಸಹಕರಿಸುವುದು ಮತ್ತು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವುದು.

3. ರೈತರು ಬೆಳೆದ ತೊಗರಿ ಬೆಳೆಗೆ ಉತ್ತಮ ಬೆಲೆ ರೈತರಿಗೆ ದೊರಕುವಂತೆ ಮಾರುಕಟ್ಟೆ ಸೌಲಭ್ಯ ಒದಗಿಸುವುದು.

4. ಧಾನ್ಯ ಸಂಗ್ರಹಣಾ ಕೊಠಡಿ, ಗೋದಾಮು ಮುಂತಾದ ಮೂಲ ಸವಲತ್ತುಗಳ ಅಭಿವೃದ್ಧಿ.

ಕೊಪ್ಪಳ ಜಿಲ್ಲೆಯನ್ನು ತೋಟಗಾರಿಕೆ ಜಿಲ್ಲೆಯೆಂದು ಪರಿಗಣಿಸುವ ಬಗ್ಗೆ.

725(183) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ತೋಟಗಾರಿಕೆ ಜಿಲ್ಲೆಗಳೆಂದು ಯಾವ ಯಾವ ಜಿಲ್ಲೆಗಳನ್ನು ಪರಿಗಣಿಸಲಾಗಿದೆ, ಪರಿಗಣಿಸಲಿಕ್ಕೆ ಮಾನದಂಡವೇನು?

ಆ) ಕೊಪ್ಪಳ ಜಿಲ್ಲೆ ಈ ನಿಯಮಾವಳಿಗಳ ವ್ಯಾಪ್ತಿಯಲ್ಲಿ ಬರುವುದಿಲ್ಲವೆ?

ಇ) ಹಾಗಿದ್ದಲ್ಲಿ, ಪ್ರಾರಂಭಿಸಲು ಘೋಷಿಸುವಿರಾ?

ಈ) ಒಟ್ಟು ರಾಜ್ಯದಲ್ಲಿ ತೋಟಗಾರಿಕಾ ಪ್ರದೇಶವೆಷ್ಟು? ಮತ್ತು ಯಾವ ಯಾವ ತೋಟಗಾರಿಕೆ ಬೆಳೆಗಳನ್ನು ಎಷ್ಟು ಹೆಕ್ಟೇರ್ ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದೆ? (ಜಿಲ್ಲಾವಾರು ವಿವರ ನೀಡುವುದು).

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು) :

ಅ) ಯಾವುದೇ ಜಿಲ್ಲೆಗಳನ್ನು ತೋಟಗಾರಿಕೆ ಜಿಲ್ಲೆಗಳೆಂದು ಘೋಷಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ರಾಜ್ಯದಲ್ಲಿ ಒಟ್ಟು ತೋಟಗಾರಿಕಾ ಪ್ರದೇಶ 15.60 ಲಕ್ಷ ಹೆಕ್ಟೇರ್‌ಗಳಷ್ಟಿದೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿರುವ ತೋಟಗಾರಿಕೆ ಬೆಳೆಗಳ ವಿವರ ಮತ್ತು ಅವುಗಳ ಪ್ರದೇಶ ವಿಸ್ತೀರ್ಣದ ವಿವರಗಳನ್ನು ಅನುಬಂಧ-1 ರಲ್ಲಿ ಜಿಲ್ಲಾವಾರು ನೀಡಲಾಗಿದೆ.